GATWU

Reg. No. ALCB-4/DRT/CUA/18/2005-06

**Garments and Textile Workers Union**

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

*(Affiliated to New Trade Union Initiative - NTUI)*

ದಿನಾಂಕ: 24.06.2020

ಉಪ ಕಾರ್ಮಿಕ ಆಯುಕ್ತರು

ವಿಭಾಗ-2,

ಕಾರ್ಮಿಕ ಭವನ,

ಬೆಂಗಳೂರು

ಮಾನ್ಯರೇ,

ವಿಷಯ: ಯೂರೋ ಕ್ಲಾತಿಂಗ್ ಕಂಪನಿ -2 (ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್) ಗೆ ಕಾನೂನು ಬಾಹಿರವಾಗಿ ಲೇಆಫ್ ಘೋಷಿಸಿರುವ ಬಗ್ಗೆ

ಉಲ್ಲೇಖ: ಕೈಗಾರಿಕಾ ವ್ಯಾಜ್ಯ ಸಂಖ್ಯೆ ಉಕಾಆಬೆಂ-2/ಕೈವಿ/ಸಿಆರ್-03/20-21

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಯೂರೋ ಕ್ಲಾಥಿಂಗ್ ಕಂಪನಿ-2 (ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿ.) ನ ಆಡಳಿತವರ್ಗದವರು ಕಾರ್ಖಾನೆಯನ್ನು ಮುಚ್ಚುವ ದುರುದ್ದೇಶದಿಂದ 30.5.2020 ಶನಿವಾರದಂದು ರಾತ್ರೋರಾತ್ರಿ ಮೆಶೀನ್‌ಗಳನ್ನು ಸಾಗಿಸಿದ್ದರು. ಕಂಪನಿಯನ್ನು ಮುಚ್ಚುವ ದುರುದ್ದೇಶದಿಂದ ಹೀಗೆ ಮಾಡುತ್ತಿದ್ದಾರೆ ಎಂದು GATWU ತಮಗೆ ದಿನಾಂಕ 1.6.2020 ಮತ್ತು 5.6.2020 ರಂದು ಪತ್ರ ಬರೆದಿರುತ್ತದೆ.

ಅದೇರೀತಿ, ಆಡಳಿತವರ್ಗದವರು ಇದ್ದಕ್ಕಿದ್ದಂತೆ ದಿನಾಂಕ 6.6.2020 ರಂದು ಸಂಜೆ 5.38 ಗಂಟೆಗೆ ಕಾನೂನು ಬಾಹಿರವಾಗಿ ಲೇಆಫ್ ಘೋಷಿಸಿ ನೋಟೀಸ್ ಅನ್ನು ಪ್ರದರ್ಶಿಸಿರುತ್ತಾರೆ. ಆಘಾತಕ್ಕೊಳಗಾದ ಕಾರ್ಮಿಕರು ಇದನ್ನು ವಿರೋಧಿಸಿ ರಾತ್ರಿ 8 ಗಂಟೆಯವರೆಗೂ ಕಾರ್ಖಾನೆಯ ಮುಂದೆಯೇ ಪ್ರತಿಭಟನೆ ನಡೆಸಿರುತ್ತಾರೆ. ಆ ಸಮಯದಲ್ಲಿ ತಾಲ್ಲೂಕಿನ ದಂಡಾಧಿಕಾರಿಯವರು ಮತ್ತು ಡಿವೈಎಸ್ಪಿ ಅವರು ಕಾರ್ಮಿಕರಿಗೆ ಸಮಾಧಾನಪಡಿಸಿ ಸೋಮವಾರ (8.6.2020) ಬಂದು ಮಾತನಾಡಿ ಎಂದು ಹೇಳಿ ಕಳುಹಿಸಿರುತ್ತಾರೆ.

ಅದರಂತೆ ದಿನಾಂಕ 08.06.2020 ರಂದು ಕಾರ್ಮಿಕರು ಕೆಲಸಕ್ಕೆ ಬಂದಾಗ ಆಡಳಿತವರ್ಗದವರು ಯಾವ ಕಾರ್ಮಿಕರಿಗೂ ಕೆಲಸವನ್ನು ಕೊಟ್ಟಿರುವುದಿಲ್ಲ. ಈ ದುಡಿಮೆಯು ತಮ್ಮ ಜೀವನೋಪಾಯದ ದಾರಿಯಾಗಿದ್ದು ತಮಗೆ ಕೆಲಸ ನೀಡಬೇಕೆಂದು ಕಾರ್ಮಿಕರು ತಮ್ಮ ಪ್ರತಿಭಟನೆಯನ್ನು ಅಂದಿನಿಂದಲೂ ಮುಂದುವರೆಸಿರುತ್ತಾರೆ. ಜೊತೆಗೆ ಆಡಳಿತವರ್ಗದವರ ಈ ಕಾನೂನು ಬಾಹಿರ ಲೇಆಫ್ ಕ್ರಮದ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದಿನಾಂಕ 08.06.2020 ರಂದು GATWU ತಮ್ಮಲ್ಲಿ ದೂರು ನೀಡಿರುತ್ತದೆ.

ನಮ್ಮ ದೂರನ್ನು ಪರಿಗಣಿಸಿದ ತಾವು ಈ ಪ್ರಕರಣವನ್ನು ಕೈಗಾರಿಕಾ ಕಾಯ್ದೆಯಡಿಯಲ್ಲಿ ದಾಖಲಿಸಿಕೊಂಡು (ಉಕಾಆಬೆಂ-2/ಕೈವಿ/ಸಿಆರ್-03/20-21) ಸಂಧಾನ ಪ್ರಕ್ರಿಯೆ ನಡೆಸುತ್ತಿದ್ದೀರಿ. ದಿನಾಂಕ 9.6.2020, 12.6.2020 ಮತ್ತು 17.6.2020 ರಂದು ನಡೆದ ಸಂಧಾನ ಸಭೆಗಳಲ್ಲಿ ಆಡಳಿತವರ್ಗದವರು ತಾವು ಎಸಗಿದ



[redacted]

ಕಾನೂನು ಬಾಹಿರ ಕ್ರಮಕ್ಕೆ ಯಾವುದೇ ಸ್ಪಷ್ಟನೆ ನೀಡಿರುವುದಿಲ್ಲ ಬದಲಿಗೆ ಯಾವುದೇ ಕಾರಣಕ್ಕೂ ಕಂಪನಿಯನ್ನು ಅಲ್ಲಿ ಪ್ರಾರಂಭಿಸಲು ಸಾಧ್ಯವಿಲ್ಲ ಎಂದು ಪುನರುಚ್ಚರಿಸಿರುತ್ತಾರೆ. ಅಂದರೆ ಅವರು ಕಾನೂನು ಬಾಹಿರ ಲೇಆಫ್ ಮುಸುಕಿನಲ್ಲಿ ಕಂಪನಿಯನ್ನು ಮುಚ್ಚುವ ದುರುದ್ದೇಶ ಹೊಂದಿರುವುದು ಇದರಿಂದಲೇ ಸ್ಪಷ್ಟವಾಗುತ್ತದೆ.

ದಿನಾಂಕ 22.06.2020 ರಂದು ಇಲಾಖೆ, ಆಡಳಿತ ವರ್ಗ ಮತ್ತು GATWU ನಡುವೆ ನಡೆದ ನಾಲ್ಕನೇ ಸುತ್ತಿನ ಸಂಧಾನ ಸಭೆಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ಆಡಳಿತವರ್ಗ ಮತ್ತು ಯೂನಿಯನ್ ಒಂದು ಒಪ್ಪಂದಕ್ಕೆ ಬರಬೇಕೆಂದು ತಾವು ಸಲಹೆ ನೀಡಿ ಸಮಯಾವಕಾಶ ನೀಡಿರುತ್ತೀರಿ.

**ಈ ಸಂಬಂಧವಾಗಿ ದಿನಾಂಕ 23.06.2020 ರಂದು GATWU ಯೂರೋ ಕ್ಲಾತಿಂಗ್ ಕಂಪನಿಯ ಸರ್ವಸದಸ್ಯರ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಸರ್ವಾನುಮತದಿಂದ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.**

**1. ದಿನಾಂಕ 6.6.2020 ರಂದು ಕಂಪನಿಯವರು ಇದ್ದಕ್ಕಿದ್ದಂತೆ ಏಕಾಏಕಿ ಘೋಷಿಸಿರುವ ಲೇಆಫ್ ಕಾನೂನು ಬಾಹಿರವಾದದ್ದು, ಮತ್ತು ಇದು ಕೈಗಾರಿಕಾ ವ್ಯಾಜ್ಯ ಕಾಯಿದೆಯ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.**

**2. ಆಡಳಿತವರ್ಗದವರು ಈ ತಕ್ಷಣವೇ ಕಂಪನಿಯನ್ನು ಪ್ರಾರಂಭಿಸಬೇಕು, ಈ ಅವಧಿಯ ಪೂರ್ಣ ವೇತನವನ್ನು ಪಾವತಿಸಬೇಕು ಮತ್ತು ಕಾರ್ಮಿಕರ ಜೀವನೋಪಾಯವನ್ನು ರಕ್ಷಿಸಬೇಕು.**

**3. ಲಾಕ್‌ಡೌನ್ ಅವಧಿಗೆ ಪೂರ್ಣ ವೇತನವನ್ನು ಪಾವತಿಸಬೇಕು.**

ಆಡಳಿತವರ್ಗವು ರಾಜಾರೋಷವಾಗಿ ಎಸಗಿದ ಕಾನೂನು ಉಲ್ಲಂಘನೆಯ ವಿರುದ್ಧ ಇಲಾಖೆಯು ಕಾನೂನು ಕ್ರಮ ಕೈಗೊಳ್ಳಬೇಕೆಂದು ಮತ್ತು ತಕ್ಷಣವೇ ಕಾರ್ಖಾನೆಯನ್ನು ಪ್ರಾರಂಭಿಸಿ ಕಾರ್ಮಿಕರಿಗೆ ಕೆಲಸ ನೀಡಬೇಕೆಂದು ಇಲಾಖೆಯನ್ನು ಮನವಿ ಮಾಡಿಕೊಳ್ಳಬೇಕೆಂದು ಎಲ್ಲ ಕಾರ್ಮಿಕರೂ ಒಕ್ಕೊರಲಿನಿಂದ ನಮಗೆ ಹೇಳಿರುತ್ತಾರೆ.

ಶ್ರೀರಂಗಪಟ್ಟಣದಂತಹ ಸಣ್ಣ ತಾಲ್ಲೂಕು ಮಟ್ಟದಲ್ಲಿ ಈ ಕಂಪನಿಯು ಕಾರ್ಯನಿರ್ವಹಿಸುವುದು ಅತ್ಯಂತ ಮುಖ್ಯವಾಗಿರುವುದರಿಂದ, ಗೋಕಲ್‌ದಾಸ್ ಆಡಳಿತವರ್ಗವು ಯೂರೋ ಕ್ಲಾತಿಂಗ್ ಕಂಪನಿ-2 ಅನ್ನು ಯಥಾಸ್ಥಿತಿಯಲ್ಲಿಯೇ ಮುಂದುವರೆಸಿಕೊಂಡು ಹೋಗಲು ನಿಟ್ಟಿನಲ್ಲಿ ತಾವು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ದಯವಿಟ್ಟು ನಮ್ಮ ಮನವಿಯನ್ನು ಪರಿಗಣಿಸಬೇಕೆಂದು ಕೋರುವ

ತಮ್ಮ ವಿಶ್ವಾಸಿ

Prathibha

ಪ್ರತಿಭಾ ಆರ್
ಅಧ್ಯಕ್ಷರು

[redacted]